ಮಾಡಿದರು. ಅವರೆಲ್ಲರ ಒತ್ತಾಯಕ್ಕೆ ಒಳಗೆ ಬಿಟ್ಟುಕೊಂಡರು. ಅದೂ ಅವರಿಗೆ ಹೆದರಿ. ಮುಂದೆಲ್ಲ ನರಕವೇ. ಹೊತ್ತು ಹೊತ್ತಿಗೆ ಊಟವಿಲ್ಲ. ರಾತ್ರಿ ನಿದ್ದೆ ಮಾಡುವಾಗಲೂ ಆಗಾಗ ಗದ್ದಲ ಮಾಡಿ ಎಬ್ಬಿಸುವುದು. ಅಂತೂ ಹಿಂಸೆಯೋ ಹಿಂಸೆ. ನಾನೇ ಮನೆ ಬಿಟ್ಟು ಹೊರಡುವ ಆಲೋಚನೆ ಮಾಡಿದೆ. ಹಾಗೆಯೇ ಅವರೊಂದಿಗೆ ಹೇಳಿದೆ ಕೂಡ. ಯಾರೂ ಎಲ್ಲಿಗೆ ಹೋಗುತ್ತೀಯ... ಎಲ್ಲಿರುತ್ತೀಯ ಎಂದು ಕೇಳಲೂ ಇಲ್ಲ. ಭಿಕ್ಷೆ ಬೇಡಿಯಾದರೂ ಬದುಕುವ ಎಂದು ಇನ್ನೇನು ಹೊರಡುವವಳಿದ್ದೆ. ಅಷ್ಟರಲ್ಲಿ ನನ್ನ ದೊಡ್ಡ ಮಗನ ಹೆಂಡತಿಯ ತಾಯಿ ಸತ್ತು ಹೋದ ಸುದ್ದಿ ಬಂದು ಹೆಂಡತಿಯ ಒತ್ತಾಯಕ್ಕೆ ಮಣಿದ ಅವ ಆಕೆಯೊಂದಿಗೆ ಮಾವನ ಮನೆಗೇ ಹೋಗಿ ಇರಲು ನಿರ್ಧರಿಸಿದ. ಚಿಕ್ಕವನಿಗೂ ಒಂದು ಮಗು ಹುಟ್ಟಿತ್ತು. ಮನೆಕೆಲಸ ಮಾಡಲು ಮತ್ತು ಆಗಾಗ್ಗೆ ಮಗುವನ್ನು ನೋಡಿಕೊಳ್ಳಲು ಅವರಿಗೂ ಒಂದು ಜನ ಬೇಕಿತ್ತು. ಅಂತೂ ನನ್ನನ್ನು ಅಲ್ಲಿಯೇ ಇಟ್ಟುಕೊಂಡರು. ಸ್ವಲ್ಪವೇ ದಿನಗಳಲ್ಲಿ ದೊಡ್ಡ ಮಗನಿಗೂ ಮಗು ಹುಟ್ಟಿತು. ಅಲ್ಲಿಯೂ ಅವನ ಹೆಂಡತಿಯೇ ಎಲ್ಲ ನೋಡಿಕೊಳ್ಳಬೇಕು. ಹಾಗಾಗಿ ಅವಳೂ ನಾನು ಅವಳ ಜೊತೆಗೇ ಇರಬೇಕೆಂದು ಗೋಳು ತೋಡಿಕೊಳ್ಳತೊಡಗಿದಳು. ಕೊನೆಗೆ ಅಣ್ಣ ತಮ್ಮ ಇಬ್ಬರೂ ಕುಳಿತುಕೊಂಡು ಒಂದು ಒಪ್ಪಂದ ಮಾಡಿಕೊಂಡರು. ನಾನು ಆರು ತಿಂಗಳು ಅಣ್ಣನ ಮನೆಯಲ್ಲಿಯೂ ಇನ್ನಾರು ತಿಂಗಳು ತಮ್ಮನ ಮನೆಯಲ್ಲಿಯೂ ಇರುವುದೆಂದು ಅವರೇ ತೀರ್ಮಾನಿಸಿದರು. ಯಾರೂ ಬಾಯಿ ಬಿಟ್ಟು ಹೇಳದಿದ್ದರೂ ಅವರಿಗೆ ಬೇಕಾಗಿದ್ದುದು ಒಬ್ಬ ಕೆಲಸದವಳು ಮತ್ತು ಮಗುವನ್ನು ನೋಡಿಕೊಳ್ಳುವ ಆಯಾ. ಅದು ಬೇರೆ ಸಂಬಳ ಕೊಡುವ ತಾಪತ್ರಯವೂ ಇಲ್ಲವಲ್ಲ. ನನಗೂ ಬೇರೆ ಆಯ್ಕೆ ಇರಲಿಲ್ಲ. ಒಪ್ಪಿದೆ.

ಅದೇ ನಡೆದುಕೊಂಡು ಬಂದಿದೆ ಇವತ್ತಿನ ವರೆಗೂ. ಅವರಿಬ್ಬರಿಗೂ ಇತ್ತೀಚೆಗೆ ಎರಡನೇ ಮಗುವೂ ಹುಟ್ಟಿದೆ. ಈ ವರ್ಷ ನನ್ನ ಹಿರೀ ಮಗನ ಮಾವನೂ ಸತ್ತು ಹೋದದ್ದರಿಂದ ಗಂಡ ಹೆಂಡತಿ ಮತ್ತು ಮಕ್ಕಳು ಆ ಊರನ್ನೇ ಬಿಟ್ಟು ಈ ಊರಿಗೆ ಬಂದಿದ್ದಾರೆ. ಅಣ್ಣ ತನ್ನ ಇಲ್ಲಿನ ವಿಳಾಸವನ್ನು ತಮ್ಮನಿಗೆ ಕಳುಹಿಸಿದ್ದ. ಅದೇ ವಿಳಾಸದ ಚೀಟಿಯನ್ನು ಹಿಡಿದುಕೊಂಡು ಇಲ್ಲಿಗೆ ಬಂದದ್ದು ನಾನು. ನನ್ನನ್ನು ಬಸ್ಸು ಹತ್ತಿಸಿ ಬಿಟ್ಟದ್ದೂ ಕಿರೀ ಮಗನೇ. ಇಲ್ಲಿ ಬಂದರೆ ಹೀಗಾಗಿದೆ.' ಅವಳ ಅಳು ಜೋರಾಗಿದ್ದುದು ಅಂತ್ಯದಲ್ಲಿ ನಿಧಾನವಾಗಿತ್ತು. ಮಾತಿನಲ್ಲಿ ದೃಢತೆ ಬಂದಿತ್ತು.

'ನಾನೇನು ಸುಮ್ಮನೆ ಬಿಡುತ್ತೇನೆಯೇ. ಅವನನ್ನು ಹುಡುಕಿಯೇ ತೀರುತ್ತೇನೆ. ಇಲ್ಲ ತಿರುಗಿ ನಾನು ಎಲ್ಲಿಂದ ಬಂದಿದ್ದೆನೋ ಅಲ್ಲಿಗೇ... ಕಿರೀ ಮಗನ ಮನೆಗೇ ಹೋಗಿಬಿಡುತ್ತೇನೆ' ಈಗ ಮಾತ್ರ ಮಾತು ಮುಗಿಯುತ್ತ ಬಂದಂತೆ ಇಲ್ಲಿಯ ವರೆಗೆ ಬುಸು ಬುಸು ಎಂದು ಶಬ್ದ ಮಾತ್ರ ಮಾಡುತ್ತಿದ್ದ ಆಕೆಯ ಅಳು ಪುನಃ ಜೋರಾಗಿತ್ತು.

ಶ್ಯಾಮಲೆ ಅಜ್ಜಿಯ ಹತ್ತಿರ ಹೋಗಿ ಆಕೆಯ ಬೆನ್ನು ಒಳಚುತ್ತಾ, 'ಪರವಾಯಿಲ್ಲ ಬಿಡಜ್ಜಿ. ನೀನು ಸಧ್ಯಕ್ಕೆ ಇಲ್ಲಿ ನಮ್ಮ ಮನೆಯಲ್ಲಿಯೇ ಇರು. ನಿಧಾನವಾಗಿ ನಿನ್ನ ಹಿರೀ ಮಗನ ಮನೆಯನ್ನು ಹುಡುಕೋಣ' ಎಂದರೂ ಆಕೆಗೆ ಸಮಾಧಾನವಾದ ಹಾಗೆ ಕಾಣಲಿಲ್ಲ. ಆದರೆ, ಬೇರೆ ದಾರಿಯೇ ಕಾಣಿಸುತ್ತಿಲ್ಲವಾದ್ದರಿಂದ ಒಪ್ಪಿದೆ ಎನ್ನುವ ಹಾಗೆ ಸುಮ್ಮನಾಗಿದ್ದಳು.

ಮುದುಕಿಯನ್ನು ನೋಡುತ್ತಿದ್ದಂತೆ ಸತ್ತ ತನ್ನ ತಾಯಿಯ ನೆನಪು ಪದೇಪದೇ ಬರುತ್ತಿದ್ದುದನ್ನು ಅವನು ಹೇಳುತ್ತಿದ್ದಂತೆಯೇ ಹೆಂಡತಿಯೂ, 'ಅದೇನು ಆಶ್ಚರ್ಯವೋ ಗೊತ್ತಿಲ್ಲ ನನಗೂ ನನ್ನ ಅಮ್ಮನ ನೆನಪೇ ಆಗುತ್ತಿದೆ' ಎಂದಳು.

★★★

ದಿನಗಳು ಕಳೆಯುತ್ತಿದ್ದುವು. ಅಜ್ಜಿಯ ಮಕ್ಕಳದ್ದು ಸುದ್ದಿಯೇ ಇಲ್ಲ. ಈ ಗಂಡ ಹೆಂಡಿರಿಬ್ಬರ ಎಲ್ಲ ಪ್ರಯತ್ನದ ಹೊರತಾಗಿಯೂ ಆಕೆಯ ಹಿರೀ ಮಗನ ಬಗ್ಗೆ, ಅವನ ವಿಳಾಸದ ಬಗ್ಗೆ ಏನೊಂದು